# ಸಾಮರಸ್ಯದ ತಾಣಗಳಾಗಿ ಶಿಂಷಾ ಮಾರಮ್ಮ ದೇಗುಲ ಹಾಗೂ ಹಜರತ್ ಮರ್ದಾನಿ ಗೈಬ್ ದರ್ಗಾ

**ಹೇಮಲತ ಪಿ. ಎನ್.**

ನಂ. 1156, 4/10ನೆ ಮುಖ್ಯರಸ್ತೆ, ಇ & ಎಫ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು.

**Received: 01/11/2024 ; Acepted: 10/11/2024 ; Published: 06/12/2024**

**DOI: https://doi.org/10.5281/zenodo.14289565**

## ABSTRACT:

ಕನ್ನಡ ನಾಡಿನಲ್ಲಿ ಪ್ರಾಚೀನ ಕಾಲದಿಂದಲೂ ಸಾಮರಸ್ಯವನ್ನು ಪ್ರತಿಬಿಂಬಿಸುವ ಅನೇಕ ಘಟನೆಗಳು ನಡೆಯುತ್ತಾ ಬಂದಿವೆ; ಅನೇಕ ಸ್ಥಳಗಳು ರೂಪುಗೊಂಡಿವೆ. ಸಂತ ಸಮುದಾಯವು ಸಾಮಾಜಿಕ ಸಾಮರಸ್ಯಕ್ಕಾಗಿ ಬೋಧಿಸುತ್ತಾ ನಡೆದು ಕನ್ನಡ ಸಂಸ್ಕೃತಿಯಲ್ಲಿ ಬಹುದೊಡ್ಡ ಕ್ರಾಂತಿಯನ್ನುಂಟುಮಾಡಿರುವುದು ಚಾರಿತ್ರಿಕ ಸಂಗತಿಯಾಗಿದೆ. ಕರ್ನಾಟಕದ ಅನೇಕ ಸಂತರೂ ಮತ್ತು ಅವರ ಶಿಷ್ಯಂದಿರ ಸೇವಾಕಾರ್ಯದ ಪ್ರಭಾವದಿಂದಾಗಿ ಸಾಮಾಜಿಕ ಸ್ವಾಸ್ಥ್ಯವೂ ಸಾಮರಸ್ಯವೂ ಸಾಧಿತಗೊಂಡು ಇಂದಿಗೂ ಜನಸಮುದಾಯಗಳು ಒಕ್ಕಲಾಗಿ ನಡೆದುಕೊಳ್ಳುತ್ತಿದ್ದಾರೆ. ಕಾವೇರಿ ನದಿಯ ಉಪನದಿಯಾದ ಶಿಂಷಾ ಹರಿವಿನ ಮಾರ್ಗದಲ್ಲಿ ರೂಪುಗೊಂಡಿರುವ ಶಿಂಷಾ ಮಾರಮ್ಮ ದೇವಾಲಯ, ಶಿವನಸಮುದ್ರ ದರ್ಗಾ ಅಥವಾ ದರ್ಗಾ ಹಜರತ್ ಮರ್ದಾನಿ ಗೈಬ್ ತಾಣಗಳು ಸಾಮಾಜಿಕ ಸಾಮರಸ್ಯಕ್ಕೆ ಹೆಸರುವಾಸಿಯಾಗಿವೆ.

## KEYWORDS:

ಶಿಂಷಾ ನದಿ, ಶಿವನಸಮುದ್ರ, ಶಿಂಷಾ ಮಾರಮ್ಮ, ದರ್ಗಾ ಹಜರತ್ ಮರ್ದಾನಿ ಗೈಬ್, ಮಂಟೇಸ್ವಾಮಿ, ಊರುಸ್.

ಕರ್ನಾಟಕದ ಜೀವನದಿಯೆಂದೇ ಪ್ರಸಿದ್ಧಿಯಾದ ಕಾವೇರಿ ನದಿಯ ಹಲವಾರು ಉಪನದಿಗಳಲ್ಲಿ ಶಿಂಷಾ ನದಿಯೂ ಒಂದು. ಕಾವೇರಿ ನದಿಯೊಂದಿಗೆ ಸಂಗಮಗೊಂಡು ಸಾಗುವ ಶಿಂಷಾ ನದಿ ಪಾತ್ರದಲ್ಲಿ ಸ್ಥಾಪನೆಗೊಂಡಿರುವ ಜಲವಿದ್ಯುತ್ ಉತ್ಪಾದನಾ ಕೇಂದ್ರವು ಚಾರಿತ್ರಿಕವಾಗಿ ಪ್ರಸಿದ್ಧಿಗೊಂಡಂತೆ ಇಲ್ಲಿನ ಶಿಂಷಾ ಮಾರಮ್ಮ ದೇವಾಲಯ, ಶಿವನಸಮುದ್ರ ದರ್ಗಾ ಅಥವಾ ದರ್ಗಾ ಹಜರತ್ ಮರ್ದಾನಿ ಗೈಬ್ ಮೊದಲಾದವು ಸಾಮಾಜಿಕ ಶಾಂತಿ ಮತ್ತು ಸಾಮರಸ್ಯದ ಹಿನ್ನೆಲೆಯಲ್ಲಿ ಬಹುಮುಖ್ಯ ನೆಲೆಗಳಾಗಿವೆ.

ಇಡೀ ಏಷ್ಯಾ ಖಂಡದಲ್ಲಿಯೇ ಸ್ಥಾಪನೆಯಾದ ಮೊಟ್ಟ ಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರ ಶಿವನಸಮುದ್ರ. ಇದು ಕಾವೇರಿ ನದಿಯನ್ನು ಕೂಡುವ ಶಿಂಷಾ ನದಿಯ ಪಾತ್ರವಿರುವ ತಾಣವಾದ್ದರಿಂದ ಇದನ್ನು ಶಿಂಷಾ ಜಲವಿದ್ಯುದಾಗಾರ ಎಂತಲೂ ಕರೆಯುತ್ತಾರೆ. ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯಲ್ಲಿರುವ ಒಂದು ದ್ವೀಪ ನಗರವಿದು. ಕಾವೇರಿ ನದಿಯ ದಂಡೆಯಲ್ಲಿ ಇರುವ ಈ ಊರಿನ ಬಳಿ ನದಿಯು ಎರಡು ಕವಲುಗಳಾಗಿ 'ಗಗನಚುಕ್ಕಿ' ಮತ್ತು 'ಭರಚುಕ್ಕಿ' ಎಂಬ ಜಲಪಾತಗಳನ್ನು ಸೃಷ್ಟಿಸುತ್ತದೆ. ಇಲ್ಲಿ 1902ರಲ್ಲಿ ಜಲವಿದ್ಯುತ್ ಉತ್ಪಾದನಾ ಕೇಂದ್ರ ಒಂದನ್ನು ಸ್ಥಾಪಿಸಲಾಯಿತು. ಈ ಜಲವಿದ್ಯುತ್ ಉತ್ಪಾದನಾ ಕೇಂದ್ರದಿಂದ ಮೊದಲ ಬಾರಿಗೆ ಕೋಲಾರದ ಚಿನ್ನದ ಗಣಿಗೆ ವಿದ್ಯುತ್ತನ್ನು ಕಳುಹಿಸಲಾಗಿತ್ತು ಮತ್ತು ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ವಿದ್ಯುತ್ ಒದಗಿಸುವ ಸಲುವಾಗಿ ಶಿಂಷಾ ಹೈಡ್ರೋ ಎಲೆಕ್ಟ್ರಿಕ್ ಪವರ್ ಸ್ಟೇಷನ್ ಅನ್ನು ಆಗಸ್ಟ್ 6, 1904ರಲ್ಲಿ ವಿದ್ಯುಕ್ತವಾಗಿ ಆರಂಭಿಸಲಾಯಿತು. ಚಾರಿತ್ರಿಕ ದಾಖಲಾತಿಗಳ ಪ್ರಕಾರ, ಶಿವನಸಮುದ್ರದಿಂದ 1902ರಲ್ಲಿ ಕೋಲಾರ ಚಿನ್ನದ ಗಣಿಗೆ, 1905ರಲ್ಲಿ ಬೆಂಗಳೂರು ನಗರಕ್ಕೆ ಮತ್ತು 1906ರಲ್ಲಿ ಮೈಸೂರು ನಗರಕ್ಕೆ ವಿದ್ಯುತ್ ಹರಿದು ಬಂದದ್ದು ವಿಶೇಷವಾದುದಾಗಿದೆ.

ಕನ್ನಡ ನಾಡಿಗೇ ಬೆಳಕನಿತ್ತ ಶಿವನಸಮುದ್ರ ವಿದ್ಯುದಾಗರ ಸಮೀಪದಲ್ಲಿಯೇ ಜನಬದುಕಿನ ಬೆಳಕಿನ ದೇವತೆಯಾಗಿ ನೆಲೆಗೊಂಡಿರುವ ಶಿಂಷಾ ಮಾರಮ್ಮನ ದೇವಾಲಯವಿದೆ. ಶಿವನಸಮುದ್ರ ಮಾರಮ್ಮ, ಶಿಂಷಾ ಮಾರಮ್ಮ, ಆದಿಶಕ್ತಿ ಮಾರಮ್ಮ ಎಂತಲೂ ಪ್ರಸಿದ್ಧಿಯಾದ ಧಾರ್ಮಿಕ ತಾಣವಿದು. ಮಂಡ್ಯದಿಂದ 60 ಕಿ.ಮೀ, ಮೈಸೂರಿನಿಂದ 75 ಕಿ.ಮೀ., ಚಾಮರಾಜನಗರದಿಂದ 60 ಕಿ.ಮೀ. ಹಾಗೂ ಬೆಂಗಳೂರಿನಿಂದ ಸುಮಾರು 150 ಕಿ.ಮೀ. ಅಂತರದಲ್ಲಿ ಈ ದೇವಾಲಯವಿದೆ. ಯಾವ ಮಾರ್ಗದಿಂದ ಬಂದರೂ ವಿಶಾಲವಾದ ಹಸಿರುಗದ್ದೆಗಳು, ಕಾವೇರಿ ನದಿಯ ಹರಿವಿನ ಹೊಳೆಯು ಕಣ್ಮನ ಸೆಳೆಯುತ್ತದೆ. ಕಾವೇರಿ ಮಹಾನದಿಯು ತನ್ನ ಉಪನದಿಯಾದ ಶಿಂಷಾವನ್ನು ಕೂಡಿಕೊಂಡು ಮೈದುಂಬಿ ಹರಿಯುವ ದಂಡೆಯಲ್ಲೇ ಮಾರಮ್ಮನ ದೇವಾಲಯವಿದೆ. ಪ್ರಾಕೃತಿಕ ಸೌಂದರ್ಯ ಹಾಗೂ ಸಾಂಸ್ಕೃತಿಕ ಸಾಮರಸ್ಯ ಕಾರಣಕ್ಕಾಗಿ ಶಿಂಷಾ ಮಾರಮ್ಮನ ದೇವಾಲಯವು ಜಗತ್ ಪ್ರಸಿದ್ಧಿಯನ್ನು ಪಡೆದಿದೆ.

ಪ್ರತಿನಿತ್ಯವೂ ಮಾರಮ್ಮನ ದರ್ಶನಕ್ಕೆ ಭಕ್ತಜನರು ಆಗಮಿಸುತ್ತಾರೆ. ಹಾದಿಯ ನಡುವೆ ಪ್ರಸಿದ್ಧ ಮಧ್ಯರಂಗ ಶ್ರೀರಂಗನಾಥಸ್ವಾಮಿ ದೇವಾಲಯ, ಪುರಾತನ ಶ್ರೀ ಪ್ರಸನ್ನ ಮೀನಾಕ್ಷೀ ಮತ್ತು ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನಗಳನ್ನು ಹಾದುಬರುತ್ತಾರೆ. ನಮ್ಮ ಕರುನಾಡಿನ ಶ್ರೀರಂಗಪಟ್ಟಣದ 'ಆದಿರಂಗ' ಹಾಗೂ ತಮಿಳುನಾಡಿನ ಶ್ರೀರಂಗಂ ಬಳಿಯ 'ಅಂತ್ಯರಂಗ'ಗಳನ್ನು ಪ್ರಾಕೃತಿಕವಾಗಿ ಹಾಗೂ

ಧಾರ್ಮಿಕವಾಗಿ ಕೂಡಿಸುವ ತಾಣವೇ ಶಿವನಸಮುದ್ರದ ಈ 'ಮಧ್ಯರಂಗ'. ಇದರೊಂದಿಗೆ ಶಿಂಷಾ ಮಾರಮ್ಮನ ದೇಗುಲದ ಸಮೀಪದಲ್ಲೇ ಶಿವನಸಮುದ್ರದ ಗಗನಚುಕ್ಕಿ, ಭರಚುಕ್ಕಿ ಜಲಪಾತಗಳಂತಹ ಹಲವಾರು ಪ್ರೇಕ್ಷಣೀಯ ತಾಣಗಳಿವೆ. ಜೊತೆಗೆ ದೇವಸ್ಥಾನದ ಸುತ್ತಮುತ್ತಲಲ್ಲಿ ಈಜಲು, ಆಟವಾಡಲು, ನೈಸರ್ಗಿಕವಾಗಿ ವಿಶ್ರಾಂತಿ ಪಡೆಯಲು ಪ್ರಾಕೃತಿಕವಾದ ಹಲವು ಸುಂದರ ತಾಣಗಳಿರುವುದನ್ನು ಕಾಣಬಹುದಾಗಿದೆ. ಪ್ರಾಕೃತಿಕವಾಗಿ ಕಾವೇರಿ ನದಿಯು ಶಿಂಷಾ ಉಪನದಿಯೊಂದಿಗೆ ಸದಾ ಹರಿಯುತ್ತಾ, ಇಲ್ಲಿಗೆ ಭೇಟಿಕೊಡುವ ಭಕ್ತಾದಿಗಳನ್ನು, ಪ್ರವಾಸಿಗರನ್ನು, ಚಾರಣಪ್ರಿಯರನ್ನು ಮೈಮನ ತಂಪುಗೊಳಿಸುವಂಥದ್ದು.

ಗ್ರಾಮದೇವತೆಯಾದ ಮಾರಮ್ಮನನ್ನು ಕುರಿತು ಈಗಾಗಲೇ ಪ್ರಚಲಿತದಲ್ಲಿರುವ ಶಿಷ್ಟ ಕಥಾನಕಗಳಿಗಿಂತ ಭಿನ್ನವಾದ ಕಥಾನಕವು ಧರೆಗೆ ದೊಡ್ಡವರಾದ ಶ್ರೀ ಮಂಟೇಸ್ವಾಮಿ ಮಹಾಕಾವ್ಯದಲ್ಲಿ ಬರುತ್ತದೆ. ಲೋಕದ ಅಹಮ್ಮು ಮತ್ತು ಅಜ್ಞಾನಗಳು ತಾರಕಕ್ಕೆ ಏರಿದಾಗ, ಅದನ್ನು ಶಾಂತಗೊಳಿಸುವ ಕೈಂಕರ್ಯದಲ್ಲಿ ಮಾರಮ್ಮನವರ ಪಾತ್ರ ಹಿರಿದಾದುದು. ಮಾರಳ್ಳಿ ಗ್ರಾಮದ ಸಿರಿವಂತರ ಅಹಮ್ಮು ಅತಿರೇಕಕ್ಕೆ ಹೋದ ಸಂದರ್ಭಕ್ಕೆ ಅಹಂಕಾರ ನಿರಸನ ಮಾಡಿ ಸುಜ್ಞಾನ ಬೋಧಿಸುವ ಸಲುವಾಗಿ ಮಂಟೇಸ್ವಾಮಿಯವರು ನೀಲಿಗ್ಯಾನದಲ್ಲಿ ಹಲವಾರು 7771 ಸ್ಥಳೀಯ ಮಾರಿಯರಿಗೆ ಆಹ್ವಾನ ನೀಡುತ್ತಾರೆ. ಈ ಆಹ್ವಾನದಲ್ಲಿ 'ಶಿಂಷಾ ಮಾರಮ್ಮ'ನ ಪ್ರಸ್ತಾಪವೂ ಬರುತ್ತದೆ:

**ಮೂಗು ಮಾರಿ ಮುಕ್ ಮಾರಿ ಗ್ವಾರದ ಮಾರಿ**
**ವಾಂತಿ ಭೇದಿ ಮಾರಿ**
**ಮಳವಳ್ಳಿ ದಂಡದ ಮಾರಿ**
**ಎದ್ದು ಬಾ ನನಕಂದ...**
**ಅಗರದಿಂಡಿ ಮಾರವ್ವ, ಮಾಂಬಳ್ಳಿ ಮಾರವ್ವ...**
**ಕೊಳ್ಳೇಗಾಲ ದುರ್ಗಿ, ಮಂಗಳದ ಮಾರಿ**
**ಎದ್ದು ಬಾ ನನ್ನ ಕಂದ...**
**ಸತ್ತಿಗಾಲದ ಮಾರಿ**
**ಜಾಗೇರಿಯ ಮಾರಿ**
**ಹನೂರಿನ ಮಾರಿ**
**ರಾಮಾಪುರದ ಮಾರಿ**
**ಎದ್ದು ಬಾ ನನ್ನ ಕಂದ**
**ಶಿಂಷಾ ಮುದ್ದು ಮಾರಿ**
**ಎಂದು ಏಳು ಸಾವಿರ ಮಾರಿಯರ ಕೂಗುತ್ತಾವ್ನೆ ನನ್ನಪ್ಪ ಧರೆಗೆ ದೊಡ್ಡವರು.**

**(ಅಂಬಳಿಕೆ ಹಿರಿಯಣ್ಣ. (2009). ದಕ್ಷಿಣ ಕರ್ನಾಟಕದ ಮಂಟೇಸ್ವಾಮಿ ಕಾವ್ಯಪರಂಪರೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯ. ಹಾವೇರಿ. ಪು.ಸಂ. 88)**

ಹೀಗೆ ಮಂಟೇಸ್ವಾಮಿಯವರು ಕೂಗಿದಾಗ 7771 ಮಾರಿಯರು ಲಾಳಾಯಿಸಿ ಕೇಳ್ಕೊಂಡು ಕಾಗೆ ಬಣ್ಣದ ಸೀರೆ, ನವಿಲು ಬಣ್ಣದ ರವಿಕೆ ಉಟ್ಕೊಂಡು ಹೊಂಗೆ ಮರ ಕಿತ್ತು ಊರುಗೋಲು ಮಾಡ್ಕೊಂಡು ಬೇವಿನ ಮರ ಕಿತ್ತು ಹಲ್ಲು ಉಜ್ಕೊಂಡು ನಾನು ಮುಂದು ತಾನು ಮುಂದು ಎಂದು ಹೇಳಿ ಧರೆಗೆ ದೊಡ್ಡವರ ಮುಂದೆ ಬಂದು ಜಗ್ಗಜಗ್ಗನೇ ಕುಣಿಯುತ್ತಾ ಬಂದರಂತೆ. ಮುಂದೆ ಎಲ್ಲಾ ಮಾರಿಯರೊಂದಿಗೆ ಶಿಂಷಾ ಮಾರಮ್ಮನೂ ಮಾರಳ್ಳಿಯ ಸಿರಿವಂತರ ಅಹಂಕಾರ ನಿರಸನ ಮಾಡುವ ಕೈಂಕರ್ಯದಲ್ಲಿ ಪಾಲ್ಗೊಳ್ಳುವ ಮೂಲಕ ಪರಂಜ್ಯೋತಿ ಪ್ರಜ್ಞೆಯನ್ನು ಬೆಳಗುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ. ಇದೇ ಪ್ರಭಾವಳಿಯುಳ್ಳ ಶಿಂಷಾ ಮಾರಮ್ಮನನ್ನು ಜನಸಮುದಾಯಗಳು ಇಂದಿಗೂ ಅದೇ ಭಾವನೆಯಲ್ಲಿ ತಮ್ಮ ಇಷ್ಟಾರ್ಥ ನೆರವೇರಿಸುವ ಮಹಾದೇವತೆ ಶಿಂಷಾ ಮಾರಮ್ಮ ಎಂದು ಭಾವಿಸುತ್ತಾರೆ.

ಶಿಂಷಾ ಮಾರಮ್ಮ ಅಥವಾ ಶಿವನಸಮುದ್ರದ ಮಾರಮ್ಮ ಎಂದರೆ ಜನರಿಗೆ ಅತ್ಯಂತ ಪೂಜ್ಯನೀಯ ತಾಣವೂ ಹೌದು ಹಾಗೂ ಜನಮನಗಳ ಆಪ್ತವಾದ ತಾಣವೂ ಹೌದು. ಇಲ್ಲಿಗೆ ಪ್ರತಿನಿತ್ಯವೂ ಜನರು ವಿವಿಧ ಕಾರಣಗಳಿಂದ ಆಗಮಿಸುತ್ತಾರೆ. ಮಾರಮ್ಮ ದೇಗುಲದ ಮುಂದಿರುವ ಪಾದಕ್ಕೆ ಮೊದಲು ಪೂಜೆ ಮಾಡಿ, ಹೊತ್ತ ಹರಕೆಗಳನ್ನು ಸಲ್ಲಿಸುತ್ತಾರೆ. ವಿಶೇಷವಾಗಿ ನಾಮಕರಣ, ಹುಟ್ಟುಹಬ್ಬ, ಬೀಗರ ಊಟ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಹೆಣ್ಣು-ಗಂಡು ಭೇದವಿಲ್ಲದೆ, ಜಾತಿ-ಮತಗಳ ಭೇದವಿಲ್ಲದೆ ಒಂದಾಗಿ ಊಟ ತಯಾರು ಮಾಡಿ, ಸರ್ವಜನರಿಗೂ ಬಡಿಸುತ್ತಾರೆ. ಯಾವುದೇ ಬಗೆಯ ಆಹಾರ ಭೇದವೂ ಇಲ್ಲಿಲ್ಲ. ಸಸ್ಯಾಹಾರವೂ ಮಾಂಸಾಹಾರವೂ ಒಂದೇ ರೀತಿಯಲ್ಲಿ ತಯಾರಿಸಿ, ವಿತರಿಸಿ, ಸೇವಿಸುತ್ತಾರೆಂಬುದೇ ಇಲ್ಲಿನ ತಾಣದ ಮಹತ್ವದ ಸಂಗತಿಗಳಲ್ಲಿ ಒಂದಾಗಿದೆ.

ಭಕ್ತಿಗೆ ಮಾತ್ರವಲ್ಲದೆ, ಬಂಧುಬಾಂಧವ್ಯ ಹಾಗೂ ಸ್ನೇಹಬಾಂಧವ್ಯದ ಸಮಾಗಮಕ್ಕೂ ಶಿಂಷಾ ಮಾರಮ್ಮನ ದೇವಾಲಯವು ಹೇಳಿಮಾಡಿಸಿದ ತಾಣವೆಂಬುದು ಅಸಂಖ್ಯ ಜನರ ಅಭಿಪ್ರಾಯ. ಇಲ್ಲಿಗೆ ಆಗಮಿಸುವ ಅನೇಕ ಜನರನ್ನು ಸಂದರ್ಶಿಸಿದಾಗ ಅವರು ಹೇಳುವ ಮಾತೇನೆಂದರೆ, ''ಯಾವಯಾವುದೋ ಕಾರಣಕ್ಕೆ ವರ್ಷಾನುಗಟ್ಟಲೆ ಭೇಟಿಯಾಗದವರು ಒಟ್ಟಿಗೆ ಮಾತಾಡಿಕೊಂಡು ಅನುಕೂಲವಾದಾಗ ಇಲ್ಲಿಗೆ ಬಂದು ಒಟ್ಟಿಗೆ ಪೂಜೆ ಮಾಡಿ, ಊಟ ಮಾಡಿ ಪರಸ್ಪರ ಸುಖಸಂತೋಷ ಹಂಚಿಕೊಳ್ಳುವುದು ತುಂಬಾ ಸಮಾಧಾನವೆನಿಸುತ್ತದೆ'' ಎಂದು. ಅಷ್ಟೇ ಅಲ್ಲದೇ, ''ನಾವು ಮಾತ್ರ ಊಟ ಮಾಡುವುದಲ್ಲದೇ, ತಾಯಿಯ ಹೆಸರಿನಲ್ಲಿ ಇಲ್ಲಿಗೆ ಬರುವ ಭಕ್ತಾದಿಗಳಿಗೆ ಊಟ ಹಾಕಿದರೆ ಏನೋ ಒಂದು ರೀತಿಯ ಸಮಾಧಾನ, ನೆಮ್ಮದಿ ಸಿಗುತ್ತದೆ'' ಎನ್ನುತ್ತಾರೆ.

ಸಾಂಸ್ಕೃತಿಕವಾಗಿ ಊರೂರುಗಳಲ್ಲಿ ಜಾತಿಮತಗಳ ಕಾರಣಕ್ಕೆ ಕಾಣುವ

ಭಿನ್ನಭೇದಗಳು ಇಲ್ಲಿಲ್ಲ. ಇಷ್ಟಾರ್ಥ ಪರಿಹಾರಕ್ಕಾಗಿ ಹರಕೆ ಹೊತ್ತ ಯಾರಾದರೂ ಶಿಂಷಾ ಮಾರಮ್ಮನ ದೇವಾಲಯಕ್ಕೆ ಆಗಮಿಸಬಹುದು. ಅನೇಕ ಗ್ರಾಮಗಳಲ್ಲಿ ಇರುವಂತೆ ನಿಗದಿತ ಜಾತಿಮತದವರಿಗೆ ಮಾತ್ರ ಪ್ರವೇಶವಿದೆ; ಇಂತಿಂತಹ ಜಾತಿಜನರಿಗೆ ಪ್ರವೇಶವಿಲ್ಲ ಎಂಬ ಯಾವುದೇ ನಿರ್ಬಂಧವಿಲ್ಲ. ಸರ್ವಜಾತಿ ಜನರೂ ಭಕ್ತಿ, ಭಾವ, ಸಮರಸದಲ್ಲಿ ಭೇಟಿಯಾಗುತ್ತಾರೆಂಬುದೇ ಮಹತ್ವದ ಸಂಗತಿಯಾಗಿದೆ. ದೇವರ ಮುಂದೆ ಸರ್ವಜನರೂ ಸಮಾನರು ಎಂಬ ಸಾರ್ವಕಾಲಿಕ ಸಂದೇಶವು ಇಲ್ಲಿನ ಆಚರಣೆಗಳಲ್ಲಿ ನಿಚ್ಚಳವಾಗಿ ಕಾಣುತ್ತದೆ ಹಾಗೂ ಸರ್ವರಿಗೂ ಅನುಭವಕ್ಕೆ ಬರುತ್ತದೆ.

ಮಾರಮ್ಮ ದೇವಾಲಯದಂತೆಯೇ ಜನಮನ ಹಾಗೂ ಜಾತಿಮತ ಸಾಮರಸ್ಯಕ್ಕೆ ಪ್ರತೀಕವಾಗಿರುವ ಮತ್ತೊಂದು ತಾಣವೂ ಸಮೀಪದಲ್ಲಿಯೇ ನೆಲೆಗೊಂಡಿದೆ. ಅದು ಒಬ್ಬ ಸೂಫಿಸಂತರನ್ನು ಕುರಿತಾದ ಆರಾಧನಾ ತಾಣ–ದರ್ಗಾ ಹಜರತ್ ಮರ್ದಾನಿ ಗೈಬ್. ಸೂಫಿ ಸಂತರಲ್ಲಿ ಪ್ರಸಿದ್ಧರಾದ ಮರ್ದಾನಿ ಗೈಬ್ ಅವರು ತಪಸ್ವಿಗಳಾಗಿ ಐಕ್ಯಗೊಂಡ ತಾಣವಾಗಿ ಇದು ಪ್ರಸಿದ್ಧಿಗೊಂಡಿದೆ. ಮನುಷ್ಯರೊಳಗಿನ ಮೌಢ್ಯಾಚರಣೆ, ದ್ವೇಷಾಸೂಯೆ ಮೊದಲಾದ ಅಮಾನವೀಯ ಗುಣಗಳನ್ನು ಮರ್ದನ ಮಾಡುವಲ್ಲಿ, ಶಾಂತಿ ಮತ್ತು ಸಾಮರಸ್ಯಗಳು ಮೂಡುವಲ್ಲಿ ಅಪಾರವಾಗಿ ಶ್ರಮಿಸಿದ ಸಂತ ಮರ್ದಾನಿ ಗೈಬ್ ಅವರು. ಹೀಗಾಗಿಯೇ ಯಾವುದೇ ಪ್ರಾದೇಶಿಕ ಅಥವಾ ಧಾರ್ಮಿಕ ಗಡಿಗಳನ್ನು ಹಾಕಿಕೊಳ್ಳದೆ, ಹಿಂದೂ–ಮುಸ್ಲಿಂ ಜನರು ಮತೀಯ ಭಿನ್ನತೆಯಿಲ್ಲದೆ ಏಕವಾಗಿ ಈ ಮಾನವೀಯ ಸಂತರನ್ನು ಆರಾಧಿಸುತ್ತಾರೆ. 1800ರ ಸುಮಾರಿನಲ್ಲಿ ಈ ದರ್ಗಾಕ್ಕೆ ಭೇಟಿ ನೀಡಿದ ಕ್ರೈಸ್ತಮತಮೂಲದ ಬ್ರಿಟಿಷ್ ಅಧಿಕಾರಿಯೊಬ್ಬ ತಾನು ಆಸ್ವಾದಿಸಿದ ಸುತ್ತಮುತ್ತಲಿನ ಪ್ರಾಕೃತಿಕ ಸೌಂದರ್ಯವನ್ನೂ ಹಾಗೂ ತನ್ನರಿವಿಗೆ ಬಂದ ದರ್ಗಾ ಸಂಬಂಧಿತ ಸಾಮಾಜಿಕ ಸಾಮರಸ್ಯವನ್ನು ತನ್ನ ಅನುಭವಕಥನದಲ್ಲಿ ಹೀಗೆ ದಾಖಲಿಸಿದ್ದಾನೆ:

"... After enjoying it for some time, I was glad to retrace my steps and view the fleecy clouds rolling round the mountain to the left of the greater fall, which, gilded by the glory of the setting sun, and enlivened by the calling and rapid evolution of the birds collecting for their evening flight, were calculated to fill the mind with admiration of the wisdom and power of the Great Creator.

Having taken my last look of this sublime scene, I returned to a pleasant and retired spot, called the Fakir's Retreat, comprising,

besides the dwellings of a few of the sect, a tomb and garden, which are kept with great care and neat–ness. The Fakirs in attendance, who beg alms of visitors through the medium of a present of fruits and flowers, told a long story of their saint, whose remains lie bur–ied there; and spoke, as became them, with grateful respect of the liberality of the present Jagheerdar, from whom they have received so much kindness....'' (Lieutenant H Jervis, Narrative of a Journey to the Falls of the Cavery; with an historical and descriptive account of the Neilgherry Hills, London: Smith, Elder & Co., 1834; P.11–12)

ಅಂದು ಆ ಬ್ರಿಟೀಷ್ ಅಧಿಕಾರಿ ಕಂಡ ರಮಣೀಯವಾದ ಪ್ರಾಕೃತಿಯ ಸೌಂದರ್ಯವನ್ನು ಇಂದಿಗೂ ದರ್ಗಾದ ಸುತ್ತಲೂ ನಾವು ಕಾಣಬಹುದಾಗಿದೆ. ಹಾಗೆಯೇ ದರ್ಗಾದಲ್ಲಿ ನಡೆಯುವ ಉರುಸ್ ಮತ್ತು ಗಂಧೋತ್ಸವಗಳಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಸಾಮರಸ್ಯವು ಇಂದಿಗೂ ಮುಂದುವರೆದುಕೊಂಡು ಸಾಗಿದೆ. ಮತಸಾಮರಸ್ಯದ ಭಾಗವಾಗಿ ಅಂದಿನ ಜಾಗೀರ್‌ದಾರರು ತೋರಿದ ಔದರ್‌ಯದ ಪ್ರತೀಕವಾಗಿ ದರ್ಗಾದ ಗಂಧೋತ್ಸವ ಆರಂಭವಾಗುವುದೇ ಜಾಗೀರ್‌ದಾರರ ಮನೆಯಿಂದ ತರುವ ಗಂಧದಿಂದ. ರಂಜಾನ್ ಹಬ್ಬದ 20ನೇ ದಿನದಂದು ಇಲ್ಲಿ ಅದ್ಧೂರಿಯಾದ ಉರುಸ್ ನಡೆಯುತ್ತದೆ. ಸ್ಥಳೀಯ ಮೂಲದಿಂದ ಮಾತ್ರವಲ್ಲದೇ ಮೈಸೂರು, ಬೆಂಗಳೂರು, ಬಾಂಬೆ, ಕಲ್ಕತ್ತಾ ಮೊದಲಾಗಿ ದೇಶವಿದೇಶಗಳಿಂದ ಅಸಂಖ್ಯ ಜನರು ಈ ಉರುಸಿನಲ್ಲಿ ಶ್ರದ್ಧಾಭಕ್ತಿಗಳಿಂದ ಪಾಲ್ಗೊಳ್ಳುತ್ತಾರೆ. ದರ್ಗಾದಲ್ಲಿ ಅರ್ಚನೆ ಮಾಡುವ ಮುಜಾವರ್ ಅವರು ಹೇಳುವಂತೆ, ''ತಪಸ್ವಿಗಳಾದ ಹಜರತ್ ಮರ್ದಾನಿ ಗೈಬ್ ಅವರ ಮೇಲಿನ ಭಕ್ತಿ ಮತ್ತು ಪೂಜ್ಯಭಾವದ ಕಾರಣವಾಗಿ ಇಲ್ಲಿನ ಹಿಂದೂ–ಮುಸಲ್ಮಾನರು ಒಂದಾಗಿ ನಾವೆಲ್ಲರೂ ಯಾವುದೇ ಭೇದಭಾವಗಳಿಲ್ಲದೆ, ಕೊಂಕುಬಿಂಕುಗಳಿಲ್ಲದೆ ಜಾಗೀರ್‌ದಾರರ ಮನೆತನದವರಿಂದ ಗಂಧವನ್ನು ತಂದು ಸಂಭ್ರಮದಿಂದ ಉರುಸ್ ಅನ್ನು ನಡೆಸಿಕೊಂಡು ಬರಲಾಗುತ್ತಿದೆ''. ಪ್ರಸ್ತುತ ದರ್ಗಾವೂ ಸಹ ಕಾವೇರಿ ನದಿಯ ಮಡಿಲೊಳಗೆ ಚಿತ್ತಾಕರ್ಷಕವಾಗಿ ಕಾಣುವಂಥದ್ದೇ ಆಗಿದೆ. ದರ್ಗಾದಿಂದ ಕಾಣುವ ಭರಚುಕ್ಕಿ ಜಲಪಾತದ ನೋಟವು ಅಮೋಘವಾದುದು; ಸುತ್ತಲೂ ಕಾಣುವ ಬೆಟ್ಟಗುಡ್ಡಗಳ ಹಸಿರು, ಝುಳುಝುಳು ನಾದದಿಂದ ಹರಿವ ಕಾವೇರಿ ಜಲಧಾರೆಯು ನಮ್ಮೊಳಗೆ ಸಂತ ಮರ್ದಾನಿ ಗೈಬ್ ಅವರಿತ್ತ ಅರಿವನ್ನು ಚಿರಸ್ಥಾಯಿಗೊಳಿಸುತ್ತದೆ.

12ನೇ ಶತಮಾನದ ಶರಣರಾದ ಅಲ್ಲಮಪ್ರಭುವು ಹೇಳುವ ಹಾಗೆ, ''ಭಕ್ತಿಯೆಂಬುದು ತೋರುಂಬ ಲಾಭ''ವಾಗುತ್ತಿರುವ ರೀತಿಯಲ್ಲಿ ಸ್ವಾರ್ಥಹಿತಾಸಕ್ತಿಗಳು

ವಿಪರೀತಕ್ಕೆ ಹೋಗುತ್ತಿರುವಾಗ, ಜಾತೀಯ ಹಾಗೂ ಮತೀಯ ಸಂಘರ್ಷಗಳು ಅಮಾನವೀಯವಾಗಿ ಉಲ್ಬಣಗೊಳ್ಳುತ್ತಿರುವಾಗ 'ಮತಿಗಳ ಬೆಳಗುವ ಮಾದೇವ'ರಂತೆ ಕಾಣುವ ಶಿಂಷಾ ಮಾರಮ್ಮ ದೇಗುಲ ಹಾಗೂ ಹಜರತ್ ಮರ್ದಾನಿ ಗೈಬ್ ದರ್ಗಾಗಳು ಶಾಂತಿ ಮತ್ತು ಸಾಮರಸ್ಯದ ತಾಣಗಳಾಗಿರುವುದು ಕನ್ನಡ ನೆಲದ ಹೆಮ್ಮೆ ಎಂದೇ ಹೇಳಬೇಕಾಗಿದೆ. ಶಿವನಸಮುದ್ರದೊಳಗೆ ಧುಮ್ಮಿಕ್ಕಿ ಹರಿವ ಕಾವೇರಿ ಜಲಧಾರೆಯಂಥ ಅರಿವು ನಮ್ಮೊಳಗೂ ಹರಿಯುವಂತೆ ಮಾಡಬಲ್ಲ ಸಾಮರಸ್ಯದ ತಾಣಗಳು ಸದಾ ಸಂದರ್ಶನಯೋಗ್ಯವಾಗಿವೆ.

**ಪರಾಮರ್ಶನ ಗ್ರಂಥಗಳು:**

1. ಪರಮಶಿವಯ್ಯ ಜೀ. ಶಂ. (ಸಂ). (1973). ಶ್ರೀ ಮಂಟೇಸ್ವಾಮಿ ಮಹಾಕಾವ್ಯ. ಸಾಹಿತ್ಯ ಸದನ. ಮೈಸೂರು.
2. ಅಂಬಳಿಕೆ ಹಿರಿಯಣ್ಣ. (2009). ದಕ್ಷಿಣ ಕರ್ನಾಟಕದ ಮಂಟೇಸ್ವಾಮಿ ಕಾವ್ಯಪರಂಪರೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯ. ಹಾವೇರಿ.
3. Lieutenant H Jervis. (1834). Narrative of a Journey to the Falls of the Cav–ery; with an historical and descriptive account of the Neilgherry Hills. Smith, Elder & Co. London.
4. ಮಂಡ್ಯ ಜಿಲ್ಲೆಯ ಗೆಜೆಟಿಯರ್. (2003). ಕರ್ನಾಟಕ ಗ್ಯಾಸೆಟಿಯರ್ ಇಲಾಖೆ. ಕರ್ನಾಟಕ ಸರ್ಕಾರ. ಬೆಂಗಳೂರು.
5. ಕರ್ನಾಟಕ ಕೈಪಿಡಿ. (2017). ಕರ್ನಾಟಕ ಗ್ಯಾಸೆಟಿಯರ್ ಇಲಾಖೆ. ಕರ್ನಾಟಕ ಸರ್ಕಾರ. ಬೆಂಗಳೂರು.
6. ಕರ್ನಾಟಕ ಗೆಜೆಟಿಯರ್: ಸಂಪುಟ–1 ಮತ್ತು 2. (1982). ಕರ್ನಾಟಕ ಗ್ಯಾಸೆಟಿಯರ್ ಇಲಾಖೆ. ಕರ್ನಾಟಕ ಸರ್ಕಾರ. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.